2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 168/2022</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಡಾ. ಚನ್ನಕೇಶವಮೂರ್ತಿ | ಪಿಡಬ್ಲೂ - 01 |
| ತಂದೆಯ ಹೆಸರು | - | ಹನುಮಂಪ್ಪ ಎಸ್. | ಸಿಡಬ್ಲೂ - 04 |
| ವಯಸ್ಸು | - | 52 ವರ್ಷ | |
| ಉದ್ಯೋಗ | - | ವೈದ್ಯಾಧಿಕಾರಿಗಳು, ತಾಲ್ಲೂಕು ಆಸ್ಪತ್ರೆ, ಬೆಳ್ತಂಗಡಿ | |
| ವಾಸ ಸ್ಥಳ | - | ಬೆಳ್ತಂಗಡಿ | |

ದಿನಾಂಕಃ **09.06.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ನಾನು 2011 ರಿಂದ 2019 ರವರೆಗೆ ಅಜ್ಜಂಪುರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 18.06.2018 ರಂದು ಲಕ್ಷ್ಮಿದೇವಿ ಎನ್ನುವ 50 ವರ್ಷದ ಮಹಿಳೆಯು ಹಲ್ಲೆಯ ಇತಿಹಾಸದಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ನಾನು ಮದ್ಯಾಹ್ನ 1.30 ಗಂಟೆಗೆ ಪರೀಕ್ಷಿಸಿದಾಗ ಅವರ ಎರಡು ಕೈಗಳಲ್ಲಿ ನೋವು ಇರುವುದು ಕಂಡುಬಂದಿರುತ್ತದೆ. ನಾನು ಅವರಿಗೆ ಆ ಸಮಯದಲ್ಲಿ ಸೂಕ್ತ ಚಿಕಿತ್ಸೆ ನೀಡಿ ಕಳುಹಿಸಿರುತ್ತೇನೆ.

3. ತದನಂತರ ಈ ಪ್ರಕರಣದ ತನಿಖಾಧಿಕಾರಿಯು ಸದರಿ ಮಹಿಳೆಗೆ ಆದ ಗಾಯದ ಪ್ರಮಾಣಪತ್ರವನ್ನು ಕೋರಿಕೊಂಡಿದ್ದು ನಾನು ಆಸ್ಪತ್ರೆಯ ದಾಖಲೆಗಳನ್ನು ಪರಿಶೀಲಿಸಿ ಈಗ ನೋಡುತ್ತಿರುವ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ.1 ರಲ್ಲಿ ಕಾಣುತ್ತಿರುವ ಗಾಯವು ಸಾದಾ ಸ್ವರೂಪದ ಗಾಯವಾಗಿದ್ದು ಅವರಿಗೆ

ಯಾರಾದರೂ ಹಲ್ಲೆ ಮಾಡಿ ಹಿಡಿದು ಎಳೆದಾಡಿದಾಗ ಅಂತಹ ಗಾಯ ಆಗುವಂತಹ ಸಾಧ್ಯತೆ ಇರುತ್ತದೆ.

ಪಾಟೀ ಸವಾಲು: ಆರೋಪಿ ಪರವಾಗಿ ಶ್ರೀ.ಕೆ.ಎಸ್.ಎಸ್.ಪಿ., ವಕೀಲರಿಂದ

4. ನಾನು ನಿಪಿ.1 ರಲ್ಲಿ ಗಾಯಾಳುವಿನ ಗುರುತಿನ ಚಿಹ್ನೆಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಗಾಯಾಳುವಿನ ಗಂಡನ ಹೆಸರಾಗಲಿ ಹಾಗೂ ಮಕ್ಕಳ ಹೆಸರಾಗಲಿ ನಿಪಿ.1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ.1 ರಲ್ಲಿ ಎರಡು ಕೈಗಳ ನಿರ್ದಿಷ್ಟ ಯಾವ ಜಾಗದಲ್ಲಿ ನೋವು ಇತ್ತು ಎಂದು ಬರೆಯಲಾಗಿಲ್ಲ ಎಂದರೆ ಸರಿ. ಗಾಯಾಳು ನೋವು ಇಲ್ಲದೇ ಇದ್ದರೂ ಕೂಡ ಅಲ್ಲಿ ನೋವು ಇದೆ ಎಂದು ನಾಟಕ ಮಾಡಬಹುದು ಎಂದರೆ ಸರಿ.

5. ನಾನು ಪೋಲೀಸರ ಕೋರಿಕೆ ಮೇರೆಗೆ ನಿಪಿ.1 ರಂತೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ